ಟೆಂಡರ್‌ದಾರರಿಗೆ ಮಾತ್ರ ನಾವು ಕೆಲಸವನ್ನು ನೀಡಿದ್ದೇವೆ. ಇದರಲ್ಲಿ ಯಾವುದೇ ಅವ್ಯವಹಾರವಾಗಿಲ್ಲ. ಅಲ್ಲಿನ ಯಂತ್ರಗಳನ್ನು ಸದುಪಯೋಗ ಮಾಡಿಕೊಳ್ಳಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಪ್ಪು ತಿಳಿದುಕೊಳ್ಳಬೇಡಿ, ನೀವು ಬೇರೆ ಸಮಯದಲ್ಲಿ ಉತ್ತರವನ್ನು ಕೊಡಿ. ಕೋಟಿ ರೂಪಾಯಿ ಬೆಲೆ ಬಾಳುವ ಯಂತ್ರಗಳು ಅಲ್ಲಿ ಬಿದ್ದಿದೆ. ಒನ್‌ಟು ಡಬ್ಬಲ್ ಕೊಟ್ಟು ತಂದು ಲೂಟಿ ಮಾಡುತ್ತಿದ್ದಾರೆ. ಅಲ್ಲಿ ಕೆಲಸವೂ ನಡೆಯುತ್ತಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರುವಿರಿ?

ಅಧ್ಯಕ್ಷರು: ಅವರ ಹತ್ತಿರ ಎಲ್ಲಾ ಮಾಹಿತಿಗಳೂ ಇವೆ. ಶಿಕ್ಷಣದ ಮೇಲೆ ಚರ್ಚೆ ನಡೆಯುವಾಗ ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುದ್ರಣದಲ್ಲಿ ಆಗಿರುವ ದೋಷಗಳಂತೂ ಹೇಳತೀರದಾಗಿದೆ. ಅಕ್ಷರಗಳು ತುಂಬಾ ತಪ್ಪಾಗಿ ಬರೆದಿದ್ದಾರೆ. ಇದರ ಬಗ್ಗೆ ಕೂಡ ಲಕ್ಷ್ಯ ಇರಬೇಕು. ಅದನ್ನು ಸರಿಪಡಿಸಬೇಕು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3818
ಸದಸ್ಯರ ಹೆಸರು : ಶ್ರೀ ಜಯಪ್ರಕಾಶ್ ಹೆಗಡೆ
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕೇಂದ್ರ ಶಿಕ್ಷಣ ಕ್ಷೇತ್ರದಲ್ಲಿ ಆಂಗ್ಲ ಮಾಧ್ಯಮದ ತರಗತಿಗಳಲ್ಲಿ ಪ್ರಾಥಮಿಕ ಹಂತದಲ್ಲೇ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮವೇನು;	ಕೇಂದ್ರ ಶಿಕ್ಷಣ ಯೋಜನೆಯಡಿಯಲ್ಲಿ ನಡೆಯುವ ಶಾಲೆಗಳಲ್ಲಿ ಐ.ಸಿ.ಎಸ್.ಸಿ.ಇ ಹಾಗೂ ಸಿ.ಬಿ.ಎಸ್.ಇ ಪಠ್ಯಕ್ರಮದ ಅನುಸಾರವಾಗಿ ಶಿಕ್ಷಣ ನಡೆಯುತ್ತಿದೆ. ಆದುದರಿಂದ ಅಂತಹ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಸದರಿ ಸಂಸ್ಥೆಗಳ ಜೊತೆ ಸಮಾಲೋಚನೆ ನಡೆಸಲಾಗುವುದು.
ಆ.	ಸಿ.ಬಿ.ಎಸ್.ಇ. ಹಾಗೂ ಐ.ಸಿ.ಎಸ್.ಇ ಕನ್ನಡ ಪುಸ್ತಕದಲ್ಲಿ ಕಳಪೆ ಗುಣಮಟ್ಟದ ಪಾಠಗಳು ಹಾಗೂ ಕೆಟ್ಟ ಪದಗಳು ಉಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
೫.	ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮವೇನು: ಇದಕ್ಕೆ ಹೊಣೆ ಗಾರರು ಯಾರು?	ಉದ್ಭವಿಸುವುದಿಲ್ಲ.

ಇಡಿ 263 ಪಿಎಂಸಿ 2005 ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು

ಶ್ರೀ. ಕೆ. ಜಯಪ್ರಕಾಶ್ ಹೆಗ್ಡೆ: ಉತ್ತರವನ್ನು ಒದಗಿಸಿದ್ದಾರೆ, ಆ ಉತ್ತರದಲ್ಲಿ ಕೇಂದ್ರ ಶಿಕ್ಷಣ ಯೋಜನೆಯಡಿಯಲ್ಲಿ ನಡೆಯುವ ಶಾಲೆಗಳಲ್ಲಿ ಐ.ಸಿ.ಎಸ್.ಸಿ.ಇ ಹಾಗೂ ಸಿ.ಬಿ.ಎಸ್.ಇ ಪಠ್ಯಕ್ರಮದ ಅನುಸಾರವಾಗಿ ಶಿಕ್ಷಣ ನಡೆಯುತ್ತಿದೆ. ಆದುದ್ದರಿಂದ ಅಂತಹ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಸದರಿ ಸಂಸ್ಥೆಗಳ ಜೊತೆ ಸಮಾಲೋಚನೆ ನಡೆಸಲಾಗುವುದೆಂದು ತಿಳಿಸಿದ್ದಾರೆ. ಅಲ್ಲಿ ಫ್ರೆಂಚ್ ಮತ್ತು ಸಂಸ್ಕೃತವನ್ನು ಅಷ್ಟೆ ಮಾಡಿಕೊಳ್ಳುತ್ತಾರೆ. ಏಕೆಂದರೆ ಅದರಲ್ಲಿ ಸುಲಭವಾಗಿ ಅಂಕಗಳನ್ನು ಪಡೆಯಬಹುದು. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಆರಿಸಿಕೊಂಡರೆ ಕನ್ನಡದಲ್ಲಿ ಸಂಧಿ ಸಮಾಸ ಇರುವುದರಿಂದ ಅಂಕಗಳು ಕಡಿಮೆ ಬರುತ್ತದೆಂದು ಕನ್ನಡ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ಆದುದರಿಂದ ಕೇಂದ್ರದ ಸಿಲಬಸ್ ಮಾಡುವವರ ಜೊತೆ ಕುಳಿತು ತಾವು ಚರ್ಚೆ ಮಾಡಬೇಕು. ಚರ್ಚಿಸದಿದ್ದರೆ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗುವುದಿಲ್ಲ. ಅಲ್ಲಿ ಸಿಂಪಲ್ ಕನ್ನಡ ಸಾಕಾಗುತ್ತದೆ. ಶಾಲೆಗಳಲ್ಲಿ ಭಾಷೆಯನ್ನು ಸರಳೀಕರಣ ಮಾಡಬೇಕಾಗುತ್ತದೆ. ಆಂಗ್ಲ ಮಾಧ್ಯಮ ಶಾಲೆಗಳಲ್ಲಿರುವ ಕನ್ನಡ ಪುಸ್ತಕದಲ್ಲಿ ಕಳಪೆ ಗುಣಮಟ್ಟವಿರುವ ಬಗ್ಗೆ ತಮ್ಮ ಗಮನಕ್ಕೆ ಬಂದಿಲ್ಲವೆಂದು ತೋರುತ್ತದೆ. ಈ ಪುಸ್ತಕದಲ್ಲಿ ಅನ್‌ಪಾರ್ಲಿಮೆಂಟರಿ ಅರ್ಥ ಬರುವ ಶಬ್ದಗಳನ್ನು ಬಳಸಿದ್ದಾರೆ. ಅದನ್ನು ನಾನು ಓದುತ್ತೇನೆ. ಆ ಪುಸ್ತಕವನ್ನು ಬರೆದಿರುವವರ ಬಗ್ಗೆ ನನಗೆ ಗೌರವವಿದೆ. ಆ ಪುಸ್ತಕವನ್ನು ಪಠ್ಯಪುಸ್ತಕ ಮಾಡಬಹುದೇ, ಅದರಲ್ಲಿರುವ ಒಂದೆರಡು ಶಬ್ದಗಳನ್ನು ಓದುತ್ತೇನೆ.

"ಬಿಕನಾಸಿ ಹೆಂಗಸನ್ನು ಹಾಡುಹಗಲಲ್ಲೇ ಭೂತ ಬಂಗಲೆಯಲ್ಲಿ ಏತಕ್ಕೆ ಖೂನಿ ಮಾಡುತ್ತಾರೆ ಎಂದು ಒಂದು ಶಬ್ದವಾಡಿದರೆ, ಸುಮಾರು ಕಡೆ ಇಂತಹ ಶಬ್ದಗಳು ಬಂದಿವೆ. ಇನ್ನೊಂದು ಕಡೆ ಥೂ ಕಳ್ಳಸೂಳೆಮಗನೇ ಎನ್ನುವುದು ಇದೆ. ಇದು ಪಠ್ಯಪುಸ್ತಕಕ್ಕೆ ಬೇಕೆ? ಇನ್ನೊಂದು ಕಡೆ ' ಬೆಳಿಗ್ಗೆ ಎದ್ದು ನಿನ್ನ ಮುಕಳಿ ದರ್ಶನವಾಗಿದೆ' ಇಂತಹ ಶಬ್ದಗಳನ್ನು ಮನೆಗಳಲ್ಲಿ ಮಕ್ಕಳು ಉಪಯೋಗಿಸಿದರೆ ನಾವು ಅವರನ್ನು ಬಯ್ಯುತ್ತೇವೆ. ಶಾಲೆಗಳಲ್ಲಿ ಪಠ್ಯಪುಸ್ತಕಗಳಲ್ಲಿ ಇಂತಹ ಶಬ್ದಗಳು ಬಂದರೆ ಮಕ್ಕಳಿಗೆ

ಇದು ದೊಡ್ಡ ವಿಷಯವೆನ್ನುವ ಅಭಿಪ್ರಾಯ ಬರುತ್ತದೆ. ಕೊನೆಯ ಪಕ್ಷ ಕೇಂದ್ರ ಸರ್ಕಾರದ ಸಿಲಬಸ್ ಇದ್ದರೂ ಸಹ.... ಏಕೆಂದರೆ ಎರಡು ವರ್ಷಗಳ ಕೆಳಗೆ ಇನ್ನೊಂದು ಕಡೆ ದಾಂಪತ್ಯ ಜೀವನದ ಬಗ್ಗೆ ಇತ್ತು. ಅದರ ಬಗ್ಗೆ ಅಲ್ಲಿದ್ದ ಗೌರವಾನ್ವಿತ ಶಿಕ್ಷಕಿಯೊಬ್ಬರು ನಾನು ಇದನ್ನು ಪಾಠ ಮಾಡುವುದಿಲ್ಲ. ಅದನ್ನು ನೀವೇ ಓದಿಕೊಳ್ಳಿ ಎಂದು ಹೇಳುವ ಪರಿಸ್ಥಿತಿ ಬಂದಿತ್ತು. ಆದ್ದರಿಂದ ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುತ್ತದೆಂದು ಅವರು ಹೇಳಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಇದು ನಮ್ಮ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಶಾಲೆಗಳಿಗೆ ಸಂಬಂಧಪಟ್ಟಿದ್ದಲ್ಲ. ಹಾಗಾಗಿ ನಾವು ಅವರಿಗೆ ಇನ್‌ಸಿಸ್ಟ್ ಮಾಡಲಿಕ್ಕೆ ಬರುವುದಿಲ್ಲ. ಅವರಿಗೆ ಅಪ್‌ಷನ್ಸ್ ಇರುತ್ತದೆ. ಅದನ್ನು ಅವರು ಮಾಡಿಕೊಳ್ಳುತ್ತಾರೆ. ಆದರೂ ಇದು ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಈ ರೀತಿ ನಮ್ಮ ರಾಜ್ಯದ ಕಂಟ್ರೋಲ್‌ಗೆ ಕೇಂದ್ರ ಸರ್ಕಾರದ ಶಾಲೆಗಳು ಬರುವುದಿಲ್ಲವೆಂದು ಅವರ ಮನಸ್ಸಿಗೆ ಬಂದಂತೆ ಪಠ್ಯಗಳನ್ನು ಇಟ್ಟು ಮಕ್ಕಳಿಗೆ ಈ ರೀತಿ ತಪ್ಪುಗಳನ್ನು ಕಾಣಿಸಿರುವುದು ಬಹಳ ತಪ್ಪು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್, ಒಂದು ನಿಮಿಷ ನಾನು ಹೇಳಿ ಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಭಾಷೆ ಪ್ರಿಂಟ್ ಆಗಿದೆಯೆನ್ನುವುದಕ್ಕೆ ಅದಕ್ಕೊಂದು ಪದವಿರಬೇಡವೇ.

ಅಧ್ಯಕ್ಷರು: ನೀವು ಉತ್ತರವನ್ನು ಹೇಳಿ

ಶ್ರೀ ಆರ್. ರಾಮಲಿಂಗಾರೆಡ್ಡಿ: ನಮ್ಮ ರಾಜ್ಯ ಸರ್ಕಾರದ ಲೋಪದೋಷಗಳು ಏನಾದರೂ ಇದ್ದರೆ ಅದು ನಮ್ಮ ಸರ್ಕಾರಕ್ಕೆ, ಇಲಾಖೆಯ ತಪ್ಪಾಗುತ್ತದೆ. ಇದು ಸೆಂಟ್ರಲ್ ಸಿಲಬಸ್, ನಾವು ಅವರಿಗೆ ಇನ್‌ಸಿಸ್ಟ್ ಮಾಡಲಿಕ್ಕೆ ಬರುವುದಿಲ್ಲ. ಆದರೂ ಅಲ್ಲಿ ಪ್ರಿಂಟ್ ಆಗಿರುವುದು ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇತ್ತೀಚೆಗೆ ಕೇಂದ್ರ ಸರ್ಕಾರದ ಸಿಲಬಸ್ ಇರುವ ಶಾಲೆಗಳಿಗೆ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂದು ಹೇಳಿ ಅವರಿಗೆ ಎನ್.ಒ.ಸಿಯನ್ನು ಕೊಡುತ್ತಿದ್ದೇವೆ. ನಿನ್ನೆ ಕೂಡ ನಾನು ಮೇಲ್ಮನೆಯಲ್ಲಿ ಈ ಬಗ್ಗೆ ಹೇಳಿದ್ದೇನೆ. ಈಗ ಬೇರೆ ರಾಜ್ಯದಿಂದ ವರ್ಗಾವಣೆಯಾಗಿ ಬರುವವರಿಗೆ ನಾವು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಇನ್‌ಸಿಸ್ಟ್ ಮಾಡಲಿಕ್ಕೆ ಬರುವುದಿಲ್ಲ. ಸಾವಿರಾರು ವರ್ಷಗಳಿಂದ ಕರ್ನಾಟಕದಲ್ಲಿರುತಂತಹವರೇ ಸೆಂಟ್ರಲ್ ಸಿಲಬಸ್ ಇರುವ ಶಾಲೆಗಳಿಗೆ ಸೇರಿಕೊಂಡು ಅಲ್ಲಿ ಕನ್ನಡವನ್ನು ಕಲಿಯುವುದಿಲ್ಲ. ಅಲ್ಲಿಯೂ ಸಹ ನಾವು ಕನ್ನಡವನ್ನು ಕಡ್ಡಾಯವಾಗಿ

ಕಲಿಯಬೇಕೆಂದು ಮಾಡಬೇಕು. ಈಗ ವಾಟಾಳ್ ನಾಗರಾಜ್ ಅವರು ಮಾತನಾಡಿ

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಕನ್ನಡ ವಿಷಯವನ್ನು ಆಯ್ಕೆ ಮಾಡುವಾಗ ನಮ್ಮ ಒಬ್ಬ ಸದಸ್ಯರು ಅಲ್ಲಿ ಇರಬೇಕಾಗುತ್ತದೆ. ಅದಕ್ಕೆ ನೀವು ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ಕನ್ನಡವನ್ನು ಕಲಿಸುವಾಗ ಅವರಿಗೆ ಓದಲಿಕ್ಕೆ ಬರದಿರುವವರು ಪುಸ್ತಕವನ್ನು ಮಾಡಬಾರದು. ರಾಜ್ಯ ಸರ್ಕಾರ ಅದನ್ನು ಕೇಳಬೇಕಾಗುತ್ತದೆ.

ಶ್ರೀ ಆರ್. ರಾಮಲಿಂಗಾರೆಡ್ಡಿ: ನಮ್ಮ ಹಾಗೆ ಕಾಮನ್ ವಿಷಯಗಳು ಅವರಲ್ಲಿಲ್ಲ. ಅವರಿಗೆ ಯಾವುದು ಬೇಕೋ ಅದನ್ನು ಪಠ್ಯ ಪುಸ್ತಕವನ್ನಾಗಿ ಇಟ್ಟುಕೊಳ್ಳುತ್ತಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಮ್ಮ ಕೇಂದ್ರ ಸರ್ಕಾರಕ್ಕೆ ನೀವು ಕನ್ನಡವನ್ನು ಕಡ್ಡಾಯ ಮಾಡಲಿಕ್ಕೆ ಅನುಮತಿ ನೀಡಬೇಕೆಂದು ಪತ್ರವನ್ನು ಕೂಡ ಬರೆಯುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈ ಪುಸ್ತಕದಲ್ಲಿ ಒಂದು ಕಡೆ **"ಬಿಕನಾಸಿ ಹೆಂಗಸು" "ಥೂ ಸೂಳೆ ಮಗನೆ "** ಮತ್ತೊಂದು ಕಡೆ ಬಂದಿದೆ. ಇವು ಅಶ್ಲೀಲ ಪದಗಳಾಗಬೇಕೇ ಹೊರತು... ನಾಟಕದಲ್ಲಿ ವಸ್ತು ಸ್ಥಿತಿಯನ್ನು ಇಡಬೇಕಾಗುತ್ತದೆ. ಆ ಪಾತ್ರಧಾರಿಗಳು ಮಾತನಾಡುವಾಗ ಸೂಳೆ ಮಗನೆ ಎಂಬ ಪದವನ್ನು ಉಪಯೋಗಿಸಲಿಲ್ಲವೆಂದರೆ ಆ ಪದಕ್ಕೆ ಮೆರಗು ಬರುವುದಿಲ್ಲ. ಹಾಗಾಗಿ ಈ ಪುಸ್ತಕವನ್ನು ಬರೆಯುವಾಗ ಶಕ್ತಿಯನ್ನು ಕೊಟ್ಟು ಗ್ರಾಮೀಣ ಮಾತುಗಳ ವಾಡಿಕೆಯನ್ನು ಇದರಲ್ಲಿ ತರಲಾಗಿರುತ್ತದೆ. ಈ ಬಿಕನಾಸಿ, ಬೇವರ್ಸಿ ಈ ಪದಗಳನ್ನು ಬಹಳ ಮಡಿವಂತಿಕೆಯಿಂದ ಇವನ್ನೆಲ್ಲಾ ಬೀದಿಗೆ ಹಾಕಿದ್ದೇವೆಂದು ಅಲ್ಲ, ಮಾನ್ಯ ಹೆಗಡೆಯವರು ತೋರಿಸಿದ್ದಾರೆ. ನಾಣ್ಣುಡಿ ಎಂದರೆ ಏನು? ಏನೋ ಸೂಳೆ ಮಗನೆ ಎಂದರೆ ಇದರ ಅರ್ಥ. ಇದನ್ನು ತೀರ ಮಡಿವಂತಿಕೆಯಿಂದ ನೋಡತಕ್ಕದ್ದು ಅಲ್ಲ. ತಾವೂ ಸಹ ಅನೇಕ ವರ್ಷಗಳ ಕಾಲ ಉಪಾಧ್ಯಾಯರಾಗಿದ್ದಿರಿ. ಒಂದು ನಾಟಕವನ್ನು ಪಠ್ಯದಲ್ಲಿ ಓದಲಿಕ್ಕೆ ಇಟ್ಟರೆ, ಆ ನಾಟಕಕ್ಕೆ ಶಕ್ತಿ ಬರಬೇಕಾದರೆ ಇಂತಹ ಪದಗಳ ಬಳಕೆಯಾಗಬೇಕಾಗುತ್ತದೆ. ಪ್ರತಿ ಪದವನ್ನು ತೀರಾ ಮಡಿಯಾಗಿ ನೋಡುವುದರ ಬದಲು ಇದನ್ನು ಉಪಯೋಗಿಸಬೇಕಾಗುತ್ತದೆಂದು ನನಗೆ ಅನ್ನಿಸುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ವಾಟಾಳ್ ನಾಗರಾಜ್ ಅವರು ತಮ್ಮ ಮನೆಯ ಮಕ್ಕಳಿಗೆ ಈ ಪದಗಳನ್ನು ಕಲಿಸಲಿ, ನಮ್ಮ ಮನೆಯ ಮಕ್ಕಳಿಗೆ ಅದು ಬೇಡ.

ಶ್ರೀ ವಾಟಾಳ್ ನಾಗರಾಜ್: ಮೊನ್ನೆ ದಿವಸ ಉಚ್ಚ ನ್ಯಾಯಾಲಯದ ಬಳಿ ಒಬ್ಬರು ನಿಂತುಕೊಂಡು ಏನೋ ನನ್ನ ಮಗ ವಾಟಾಳ್ ನಾಗರಾಜ್ ಎಷ್ಟು ಚೆನ್ನಾಗಿ ಮಾತನಾಡುತ್ತಾನೆ ಎಂದು ಹೇಳಿದಾಗ ಆತ ನನ್ನ ಮೇಲಿನ ಪ್ರೀತಿಗೆ ಹೇಳಿದನೇ ಹೊರತು ಅವನ ಮಗ ನಾನು ಆಗಲಿಕ್ಕೆ ಸಾಧ್ಯವಿಲ್ಲ. ಇವೆಲ್ಲಾ ವಾಡಿಕೆಯ ಮಾತುಗಳಾಗುತ್ತವೆ.

ಶ್ರೀ ಜಯಪ್ರಕಾಶ್ ಹೆಗಡೆ: ವ್ಹಾಡಿಕೆಯ ಮಾತುಗಳು ಶಾಲೆಗೆ ಬರಬಾರದು; ಶಾಲೆಯಲ್ಲಿ ಬಳಸುವ ಶಬ್ದಕ್ಕೂ ವಾಡಿಕೆಯ ಶಬ್ದಕ್ಕೂ ಬಹಳ ವ್ಯತ್ಯಾಸವಿದೆ.

ಶ್ರೀ ವಾಟಾಳ್ ನಾಗರಾಜ್: ಶಾಲೆಯನ್ನು ಮಡಿವಂತಿಕೆ ಮಾಡಬಾರದು. ಸಾಹಿತಿ ಬಹಳ ಉತ್ತಮವಾಗಿ ಬರೆದಿರುತ್ತಾರೆ.

ಶ್ರೀ ಜಯಪ್ರಕಾಶ್ ಹೆಗ್ಡೆ: ಸಾಹಿತ್ಯಕ್ಕೆ ತೊಂದರೆಯಿಲ್ಲ, ಪಠ್ಯಪುಸ್ತಕಕ್ಕೆ ಬರಬಾರದು.

ಶ್ರೀ ವಾಟಾಳ್ ನಾಗರಾಜ್: ಅದು ಬರಲಿಲ್ಲವೆಂದರೆ ಗ್ರಾಮ್ಯ ಪದಗಳು ಆ ಜನಕ್ಕೂ ಗೊತ್ತಾಗುವುದಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ಈಗಾಗಲೇ ಈ ವಿಷಯದ ಮೇಲೆ ವಿಸ್ತೃತವಾಗಿ ಚರ್ಚೆಯಾಗಿದೆ. ನಿಮಯ 69ರ ಮೇರೆಗೆ ಚರ್ಚೆಯಾಗಿದೆ. ಆದರೆ ಮಂತ್ರಿಗಳೂ ಕೂಡ ಮೊನ್ನೆ ಉತ್ತರಿಸುವಾಗ ಈ ಕಾಮಗಾರಿಗಳ ಅನುಷ್ಠಾನದಲ್ಲಿ ಸ್ವಲ್ಪ ಲೋಪದೋಷ ಇರುವುದರಿಂದ ಅದನ್ನು ಸರಿಪಡಿಸಬೇಕಾಗಿರುವುದರಿಂದ ಸ್ವಲ್ಪ ವಿಳಂಬವಾಗುತ್ತಿದೆ ಯೆಂದು ಹೇಳಿದ್ದಾರೆ. ಈಗ ನನ್ನ ಪ್ರಶ್ನೆ 2003–04ರಲ್ಲಿ 118.41 ಲಕ್ಷ ರೂಪಾಯಿ ಗಳನ್ನು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ. ಆದರೆ ಇವರು ಖರ್ಚು ಮಾಡಿರುವ ಹಣ ಇದುವರೆಗೆ 118.41 ಲಕ್ಷ ರೂ.ಗಳಲ್ಲಿ ಕೇವಲ 38.19 ಲಕ್ಷ ರೂಪಾಯಿಗಳು ಮಾತ್ರ. ಈ ಕಾಮಗಾರಿಯ ವಿಳಂಬವಾಗುವುದನ್ನು ತಪ್ಪಿಸಬೇಕು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5363
ಸದಸ್ಯರ ಹೆಸರು : ಶ್ರೀ ರಾಮಸ್ವಾಮಿ ಎ.ಟಿ. (ಅರಕಲಗೂಡು)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>1</td><td>ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ರಸ್ತೆ ಯೋಜನೆ ಪ್ರಾರಂಭ ವಾದಾಗಿನಿಂದ ವರ್ಷವಾರು ಮಂಜೂರಾದ ಹಣ ಎಷ್ಟು;</td><td>ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ರಸ್ತೆ ಯೋಜನೆಯಡಿ ಮಂಜೂರಾದ ಹಣದ ವಿವರಗಳು ಈ ಕೆಳಕಂಡಂತಿದೆ.
(ರೂ. ಕೋಟಿಗಳಲ್ಲಿ)
<table>
<tr><th>2000–01(ಹಂತ–1)</th><th>2001–02 ಮತ್ತು 2002–03(ಹಂತ–2)</th><th>2003–04 (ಹಂತ–3)</th></tr>
<tr><td>103.67</td><td>220.26</td><td>118.41</td></tr>
</table>
</td></tr>
</table>